ಸರ್ಕಾರಿ ನೌಕರರಿಗೆ ಸಂಬಂಧಿಸಿದಂತೆ ರಾಜ್ಯದಲ್ಲಿ ಇತ್ಯರ್ಥವಾಗದೇ ಉಳಿದಿರುವ ಮೊಕದ್ದಮೆಗಳು.

ಶಿರಸಿ. ಶ್ರೀ ಡಿ. ಟಿ. ಜಯಕುಮಾರ್, (ನಂಜನಗೂಡು).—ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ ಹಾಗೂ ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿ ನಗರಾಭಿವೃದ್ಧಿ ಇಲಾಖೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಎ) ಸರ್ಕಾರಿ ನೌಕರರಿಗೆ ಸಂಬಂಧಿಸಿದಂತೆ ರಾಜ್ಯದಲ್ಲಿ ಇತ್ಯರ್ಥವಾಗದೇ ಉಳಿದಿರುವ ಮೊಕದ್ದಮೆಗಳ ಸಂಖ್ಯೆ ಎಷ್ಟು?

ಬಿ) ಮೇಲ್ಕಂಡ ವಿಷಯಗಳನ್ನು ಇತ್ಯರ್ಥ ಮಾಡುವಲ್ಲಿ ಉಂಟಾಗಿರುವ ವಿಳಂಬದಿಂದ ಸರ್ಕಾರಿ ನೌಕರರಿಗೆ ಅನ್ಯಾಯವಾಗುವುದಿಲ್ಲವೇ ?

ಸಿ) ಈ ಮೊಕದ್ದಮೆಗಳನ್ನು ಶೀಘ್ರವಾಗಿ ಇತ್ಯರ್ಥಗೊಳಿಸಲು ಸರ್ಕಾರವು ಯಾವ ಕ್ರಮಗಳನ್ನು ಕೈಗೊಂಡಿದೆ?

ಶ್ರೀ ಎ. ಲಕ್ಷ್ಮೀಸಾಗರ್, (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ ಹಾಗೂ ಆಹಾರ ಮಂತ್ರಿ ನಾಗರೀಕ ಸರಬರಾಜು ಮತ್ತು ನಗರಾಭಿವೃದ್ಧಿ ಇಲಾಖೆಯ ಸಚಿವರು).—

ಎ) ೧-೮-೧೯೮೬ ಅಂಕಿಅಂಶಗಳ ಪ್ರಕಾರ ೧೧,೩೭೫ ರಿಟ್ ಅರ್ಜಿಗಳು ಮತ್ತು ೪೬೯ ರಿಟ್ ಅಪೀಲುಗಳು ಇತ್ಯರ್ಥವಾಗದೇ ಉಳಿದಿವೆ.

ಬಿ) ಇಲ್ಲ.

ಸಿ) ಸೇವಾ ವಿಷಯಗಳ ವಿಚಾರಣೆಯನ್ನು ನಡೆಸಲು ಪ್ರತ್ಯೇಕ ರಾಜ್ಯ ಸೇವಾ ನ್ಯಾಯಾಧಿಕರಣವನ್ನು ರಚಿಸಲಾಗುತ್ತಿದೆ. ಈ ನ್ಯಾಯಾಧಿಕರಣವು ೬-೧೦-೧೯೮೬ ರಿಂದ ಕಾರ್ಯಾರಂಭ ಮಾಡುವ ಸಾಧ್ಯತೆ ಇದೆ.

ಅಗ್ನಿಶಾಮಕ ದಳದ ಸುಧಾರಣೆ ಬಗ್ಗೆ

೪೬೫. ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಮಂಗಳೂರು).—ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಎ) ಮಂಗಳೂರಿನ ಅಗ್ನಿಶಾಮಕ ದಳವು ಎರಡು-ಮೂರು ಮಹಡಿಗಳವರೆಗೆ ಜರುಗುವ ಅಗ್ನಿ ಅನಾಹುತವನ್ನು ನಂದಿಸುವ ಅಲ್ಪಶಕ್ತಿ ಮಾತ್ರ ಹೊಂದಿರುವುದರಿಂದ, ಈಗಿರುವ ಅಗ್ನಿಶಾಮಕ ದಳದ ಸಮರ್ಪಕ ಆಧಿಕ ಶಕ್ತಿ ಇರುವ ಹಾಗೂ ಹತ್ತನೇ ಮಹಡಿಯವರೆವಿಗಿನ ಅಗ್ನಿ ನಿರೋಧಕ ಸಲಕರಣೆಯನ್ನು ಒದಗಿಸುವ ಯೋಜನೆ ಸರಕಾರದವರಲ್ಲಿದೆಯೇ

ಆ) ಹಾಗಿದ್ದಲ್ಲಿ, ಇದನ್ನು ಯಾವ ನಿಗದಿತ ಸಮಯದೊಳಗೆ ಕಾರ್ಯಗತಗೊಳಿಸಲಾಗುವುದು ?

ಶ್ರೀ ಬಿ. ರಾಚಯ್ಯ (ಮಾನ್ಯ ಗೃಹ ಮಂತ್ರಿಗಳು).—

ಎ) ಅಗ್ನಿ ಅನಾಹುತವು ೩೦ ಮೀಟರ್ ಎತ್ತರದವರೆಗೂ ಆದರೂ ತಡೆಯುವ ಸ್ನಾರ್ಕಲ್‌ನ್ನು ಮಂಗಳೂರು ಅಗ್ನಿಶಾಮಕ ಠಾಣೆಗೆ ಒದಗಿಸಬೇಕೆಂಬ ಯೋಚನೆ ಸರ್ಕಾರದ ಆಲೋಚನೆಯಲ್ಲಿದೆ.

ಆ) ಇದನ್ನು ಹಂತಹಂತದಲ್ಲಿ ಕಾರ್ಯರೂಪಕ್ಕೆ ತರಲಾಗುವುದು.

ಪ್ರಾದೇಶಿಕ ಸಾರಿಗೆ ಕಚೇರಿ ನಿರ್ಮಾಣದ ಬಗ್ಗೆ

(೬೧೨ (ಬಿ) ಶ್ರೀ ಐ.ಬಿ. ಶಂಕರ್ (ಚಿಕ್ಕಮಗಳೂರು).—ಮಾನ್ಯ ಸಾರಿಗೆ, ಸಣ್ಣ ಉಳಿತಾಯ ಮತ್ತು ಬಂದೀಖಾನೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?